# ಪುರಾತನ ಸುಣ್ಣದ ಡಬ್ಬಿ

ಎಲೆ ಅಡಿಕೆಗೆ ಸುಣ್ಣ ಬೇಕೇ ಬೇಕು. ಸುಣ್ಣ ತುಂಬಲು ಈಗ ಪ್ಲಾಸ್ಟಿಕ್, ಸ್ಟೀಲ್ ಡಬ್ಬಿಗಳು ಬಂದಿವೆ. ಆದರೆ ಇಲ್ಲೊಬ್ಬರ ಮನೆಯಲ್ಲಿ ಹಳೆಯ ಕಾಲದ ತಾಮ್ರದ ಡಬ್ಬಿ ಇದೆ. ಅದು ಚೆಂಡಿನಾಕಾರದಲ್ಲಿದ್ದು, ತಿರುಗುಣಿ ಇದೆ. ಅದನ್ನು ಬಿಚ್ಚಿ ಸುಣ್ಣ ತುಂಬಬಹುದು. ಸುಣ್ಣ ತೆಗೆಯಲು ಸಣ್ಣದಾದ ತೂತಿದೆ. ಅದರ ಮೂಲಕವೇ ತೆಗೆಯಬೇಕು. ಅದಕ್ಕೊಂದು ಕಡ್ಡಿಯೂ ಇದೆ. ಅದು ಕಳೆದು ಹೋಗಬಾರದು ಎಂದು ಚೈನ್ ಹಾಕಲಾಗಿದೆ.

**-ಬಸವರಾಜ ಹವಾಲ್ದಾರ, ಹುಬ್ಬಳ್ಳಿ**





# ಬಹೂಪಯೋಗಿ ಟ್ರೀ!

ದೂರದಿಂದ ನೋಡುವಾಗ ಅರಳಿದಂತೆ ಕಾಣುವ ಈ ಹೂವು ಸೋಲಾರ್ ಟ್ರೀ. ಇತ್ತೀಚೆಗೆ ದೆಹಲಿಯ ಮುನ್ಸಿಪಲ್ ಕೌನ್ಸಿಲ್ ನೇತೃತ್ವದಲ್ಲಿ ನಗರದಾದ್ಯಂತ ಸೋಲಾರ್ ಟ್ರೀಗಳನ್ನು ಅಳವಡಿಸುವ ಕಾರ್ಯ ನಡೆಯುತ್ತಿದೆ. ಪ್ರಯಾಣಿಕರಿಗೆ ಆಕರ್ಷಣೀಯ ತಾಣವಾಗಿರುವ ಇದು ಮೊಬೈಲ್ ಅಥವಾ ಎಲ್ಇಡಿ ಲೈಟ್‌ಗಳಿಗೆ ಚಾರ್ಜಿಂಗ್ ಸೌಲಭ್ಯ ಹಾಗೂ ರಾತ್ರಿ ವೇಳೆ ಬೆಳಕನ್ನೂ ನೀಡುತ್ತದೆ. ಒಂಬತ್ತು ಎಸಳುಗಳಿರುವ ಇದರಿಂದ 1.2 ಕಿಲೊವಾಟ್ ಪ್ರಮಾಣದ ಶಕ್ತಿ ಉತ್ಪತ್ತಿಯಾಗುತ್ತದೆ. ಈಗಾಗಲೇ ಸೋಲಾರ್ ಬಸ್‌ಸ್ಟ್ಯಾಂಡ್ ನಿರ್ಮಿಸಿ ಸೈ ಎನಿಸಿಕೊಂಡಿರುವ ದೆಹಲಿಯ ಮುನ್ಸಿಪಲ್ ಮಂಡಳಿಯ ಕ್ರೀಯಾಶೀಲತೆಗೊಂದು ಸಲಾಂ! ಬಿಸಿಲು ಹೇರಳವಾಗಿ ಉಚಿತವಾಗಿ ಸಿಗುವ ನಮ್ಮ ರಾಜ್ಯದಲ್ಲೂ ಇಂತಹ ಡಿಜಿಟಲ್ ಹಬ್‌ಗಳನ್ನು ಸ್ಥಾಪಿಸಲು ಸರ್ಕಾರ ಮುಂದಾಗಬೇಕಷ್ಟೇ.

**-ನರಸಿಂಹ ಆರ್. ಹೊಳ್ಳ, ಉಡುಪಿ**

# ಶಬರಿಮಲೆಯ ಕಮಂಡಲ!

ಶಬರಿಮಲೆಯಲ್ಲಿರುವ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ ದೇಶದ ವಿವಿಧೆಡೆಯ ಲಕ್ಷಾಂತರ ಭಕ್ತರನ್ನು ಸೆಳೆಯುವ ಪವಿತ್ರ ಶ್ರದ್ಧಾ ಕೇಂದ್ರ. ಅಯ್ಯಪ್ಪ ಸನ್ನಿಧಾನಕ್ಕೆ ಸುಮಾರು 2 ಕಿ.ಮೀ.ಅಂತರದಲ್ಲಿರುವ ಶಬರಿ ಪೀಠದ ಬಳಿ ಇತ್ತೀಚೆಗೆ ನೂತನ ಮಾದರಿಯ ಕುಡಿಯುವ ನೀರಿನ ವಿತರಣಾ ವ್ಯವಸ್ಥೆ ಕಲ್ಪಿಸಲಾಗಿದೆ. ಋಷಿಮುನಿಗಳು ಬಳಸುವ ಕಮಂಡಲದ ಆಕಾರದಲ್ಲಿರುವ ನೀರು ವಿತರಣಾ ಸೌಲಭ್ಯ ಭಕ್ತರನ್ನು ಕೈಬೀಸಿ ಸೆಳೆಯುತ್ತಿದೆ. ಆಕರ್ಷಕ ಪೀಠದ ಮೇಲೆ ನಿರ್ಮಿಸಲಾದ ಈ ಬೃಹತ್ ಕಮಂಡಲದ ವಿನ್ಯಾಸ ಬೆಟ್ಟ ಏರುವ ಭಕ್ತಾದಿಗಳ ಮನ ತಣಿಸುತ್ತಿದೆ.

**- ಸತೀಶ್ ಶೆಟ್ಟಿ ಕೊಡಿಯಾಲ್‌ಬೈಲ್**

